ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 483 (571)

ಸದಸ್ಯರ ಹೆಸರು : ಶ್ರೀ.ಅರವಿಂದ್‌ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 23.07.2019

ಉತ್ತರಿಸುವ ಸಚಿವರು : ಮಾನ್ಯ ಉನ್ನತ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೀದರ್‌ಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡಿದ್ದು ಯಾವಾಗ: ಕಾಲೇಜಿನ ಆರಂಭ ಯಾವ ಹಂತದಲ್ಲಿದೆ: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಕಾಲೇಜು ಆರಂಭವಾಗುವುದೇ:	2016-17 ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಹೊಸ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ತಾತ್ವಿಕ ಮಂಜೂರಾತಿ ನೀಡಿ ಆದೇಶಿಸಲಾಗಿದೆ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಬೀದರ್ ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ರೂ.58.00 ಕೋಟಿಗಳ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಸದರಿ ಕಾಮಗಾರಿಯು ಪ್ರಸ್ತುತ Ground floor roof bar bending ಹಂತದ ಕಾಮಗಾರಿಯು ಪ್ರಗತಿಯಲ್ಲಿದೆ. ಎ.ಐ.ಸಿ.ಟಿ.ಇ ನವದೆಹಲಿಯ 2018-19 ನೇ ಸಾಲಿನ ಮಾರ್ಗಸೂಚಿ Chapter-1 (1.1) e ರನ್ವಯ"Applicants are advised to apply only if the Building for the first year is complete as per the Infrastructure requirements in all respects at the time of submitting the application on the AICTE web-portal"ಆದುದರಿಂದ ಕಟ್ಟಡ ಕಾಮಗಾರಿಯು ಪೂರ್ಣಗೊಂಡ ನಂತರ ಇತರೇ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಎಐಸಿಟಿಇ ಅನುಮೋದನೆ ದೊರೆತ ನಂತರ ಕಾಲೇಜನ್ನು ಪ್ರಾರಂಭಿಸಲಾಗುವುದು. ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕಾಲೇಜು ಪ್ರಾರಂಭ ಮಾಡಲು ಸಾಧ್ಯವಿರುವುದಿಲ್ಲ.
ಆ)	ಬೀದರ್ ಗವಾನ್ ಸಂಶೋಧನಾ ಕೇಂದ್ರ (ಶೈಕ್ಷಣಿಕ) ಆರಂಭಿಸುತ್ತಿರುವುದು ನಿಜವೇ:	ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಆರಂಭಿಸುತ್ತಿಲ್ಲ
ಇ)	ಹಾಗಿದ್ದಲ್ಲಿ ಇಲ್ಲಿಯವರೆಗೆ ಯಾವ ಯಾವ ಕಾರ್ಯಗಳು ಪೂರ್ಣಗೊಂಡಿವೆ: ಈ ಸಂಶೋಧನಾ ಕೇಂದ್ರ ಯಾವ ಸೌಲಭ್ಯಗಳನ್ನೊಳಗೊಂಡಿರಲಿದೆ: ಈ ಸಂಶೋಧನಾ ಕೇಂದ್ರಕ್ಕೆ ಮಂಜೂರಾದ ಅನುದಾನ ಎಷ್ಟು? (ಇಲ್ಲಿಯವರೆಗೆ ಖರ್ಚಾಗಿರುವ ಅನುದಾನದ ವಿವರ ನೀಡುವುದು)	ಉದ್ಭವಿಸುವುದಿಲ್ಲ

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಇಡಿ 11 ಹೆಚ್‌ಪಿಯು 2019